ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803
ಅಂತರ್ಜಾಲ: www.kptcl.com
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521
ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.

**ಸಂಖ್ಯೆ: ಕವಿಪ್ರನಿನಿ/ಬಿ16/780/2019-20** **ದಿನಾಂಕ:** 7 DEC 2019

## ಸುತ್ತೋಲೆ

**ವಿಷಯ:** ಪ್ರಭಾರ ಭತ್ಯೆಯ ಪರಿಷ್ಕೃತ ದರಗಳು ಜಾರಿಗೊಳ್ಳುವ ದಿನಾಂಕದ ನಿರ್ಧರಣೆ ಕುರಿತಂತೆ ಸ್ಪಷ್ಟೀಕರಣ.

**ಉಲ್ಲೇಖ:**
1. ಪರಿಷ್ಕೃತ ವೇತನ ಮತ್ತು ಇತ್ಯಾದಿ ವಿಷ೦ಯಗಳ ಬಗ್ಗೆ ದಿನಾಂಕ: 02.03.2018 ರಂದು ಕವಿಪ್ರನಿನಿ ನೌಕರರ ಸಂಘ (ನೋ.ಸ.659) ಮತ್ತು ನಿಗಮದ ಆಡಳಿತ ವರ್ಗದ ನಡುವೆ ಆದ ಒಪ್ಪಂದ.
2. ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ನಿಗಮದ ನೌಕರರಿಗೆ ವೇತನವನ್ನು ಪರಿಷ್ಕರಿಸಿ ಹೊರಡಿಸಿರುವ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69516/2017-18 ದಿನಾಂಕ: 09.03.2018.
3. ದಿನಾಂಕ: 01.04.2017 ರಿಂದ ಅನ್ವಯವಾಗುವಂತೆ ನಿಗಮದ ಅಧಿಕಾರಿಗಳಿಗೆ ವೇತನವನ್ನು ಪರಿಷ್ಕರಿಸಿ ಹೊರಡಿಸಿರುವ ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/69517/2017-18 ದಿನಾಂಕ: 09.03.2018.
4. ಪ್ರಭಾರ ಭತ್ಯೆಯ ದರಗಳನ್ನು ಪರಿಷ್ಕರಿಸಿ ಹೊರಡಿಸಿರುವ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 08 ಎಸ್‌ಆರ್‌ಎಸ್ 2018 ದಿನಾಂಕ: 30.04.2019.
5. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/780/2019-20 ದಿನಾಂಕ: 20.05.2019.
6. ಪ್ರಭಾರ ಭತ್ಯೆಯ ಪರಿಷ್ಕೃತ ದರಗಳ ನಿರ್ಧರಣೆ ಕುರಿತು ಸ್ಪಷ್ಟೀಕರಣ ಹೊರಡಿಸಿರುವ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 05 (ಇ) ಸೇನಿಸೇ 2019 ದಿನಾಂಕ: 25.11.2019.

***

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/780/2019-20 ದಿನಾಂಕ: 20.05.2019 ರಲ್ಲಿ ನಿಗಮದ ನೌಕರರು/ಅಧಿಕಾರಿಗಳನ್ನು ಕವಿಮಂ ನೌಕರರ ಸೇವಾ ನಿಬಂಧನೆಗಳ ನಿಬಂಧನೆ-51 ರಂತೆ ಸ್ವತಂತ್ರ ಪ್ರಭಾರದಲ್ಲಾಗಲಿ ಅಥವಾ ತಮ್ಮ ಹುದ್ದೆಯ ಕರ್ತವ್ಯದ ಜೊತೆ ಬೇರೊಂದು ಹುದ್ದೆಯಲ್ಲಿ ಅಧಿಕ ಪ್ರಭಾರದಲ್ಲಿರಿಸಿದಾಗ ಆ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ವೇತನದಲ್ಲಿ **ಮೊದಲ ಮೂರು ತಿಂಗಳವರೆಗೆ ಶೇಕಡಾ 7.5 ರ ದರದಲ್ಲಿ,** ಆ ನಂತರದ **ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಗೆ ಶೇಕಡಾ 15 ರ ದರದಲ್ಲಿ** ಪ್ರಭಾರ ಭತ್ಯೆಯನ್ನು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ ಮತ್ತು ಸದರಿ ದರವು ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಜಾರಿಗೆ ಬರುವುದಾಗಿ ಆದೇಶಿಸಲಾಗಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 05(ಇ) ಸೇನಿಸೇ 2019, ದಿನಾಂಕ: 25.11.2019 ರಲ್ಲಿ, ಮೂರು ತಿಂಗಳಿಗಿಂತ ಹೆಚ್ಚಿನ ಅವಧಿಯ ಪ್ರಭಾರ ವ್ಯವಸ್ಥೆಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಶೇ.15 ರ ದರದ ದಿನಾಂಕದ ಪರಿಗಣನೆ ಕುರಿತು ಸ್ಪಷ್ಟೀಕರಿಸಲಾಗಿರುತ್ತದೆ. ಸರ್ಕಾರದ ಸದರಿ ಸುತ್ತೋಲೆಯನ್ವಯ, ಪ್ರಭಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿದೆ:

1. ದಿನಾಂಕ: 20.05.2019 ರ ತರುವಾಯದಲ್ಲಿ ಪ್ರಭಾರದಲ್ಲಿರಿಸಿದ ಪ್ರಕರಣಗಳಲ್ಲಿ, ಮೊದಲ ಮೂರು ತಿಂಗಳವರೆಗಿನ ಅವಧಿಗೆ ಶೇ.7.5 ರ ದರದಲ್ಲಿ, ಮೂರು ತಿಂಗಳ ಅವಧಿಯು ಮುಕ್ತಾಯಗೊಂಡ ತರುವಾಯದ ದಿನಾಂಕದಿಂದ ಶೇ.15 ರ ದರದಲ್ಲಿ ಪ್ರಭಾರ ಭತ್ಯೆಯನ್ನು ನಿಯತಗೊಳಿಸತಕ್ಕದ್ದು.

2. ದಿನಾಂಕ: 20.05.2019 ಕ್ಕೆ ಮೂರು ತಿಂಗಳ ಪ್ರಭಾರ ಅವಧಿಯು ಮೀರಿದ ಪ್ರಕರಣಗಳಲ್ಲಿ ಶೇ.15 ರ ದರದಲ್ಲಿ ಪ್ರಭಾರ ಭತ್ಯೆಯನ್ನು ನಿಯತಗೊಳಿಸತಕ್ಕದ್ದು.

3. ಪ್ರಭಾರ ಭತ್ಯೆಯ ದರಗಳು, ದಿನಾಂಕ: 20.05.2019 ರ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದರಿಂದ, ಈ ಆದೇಶ ಹೊರಡಿಸುವುದಕ್ಕಿಂತ ಹಿಂದಿನ ಅಂದರೆ, ದಿನಾಂಕ: 19.05.2019 ಕ್ಕಿಂತ ಹಿಂದಿನ ಪ್ರಭಾರದ ಅವಧಿಗೆ ಸಂಬಂಧಿಸಿದಂತೆ ಎಷ್ಟೇ ಅವಧಿಯು ಒಳಗೊಂಡಿದ್ದರೂ, ಹಿಂದಿನ ದರದಲ್ಲಿಯೇ (ಅಂದರೆ ಶೇ.7.5 ರ ದರದಲ್ಲಿ) ಪ್ರಭಾರ ಭತ್ಯೆಯನ್ನು ನಿಯತಗೊಳಿಸತಕ್ಕದ್ದು.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ:

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

   www.kptcl.com/eprasarana for information of:

6. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
9. ಕ್ರೋಢೀಕರಣ ಘಟಕ, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಪಿಂಚಣಿದಾರರ ಸಂಘ, ಕಾವೇರಿಭವನ, ಬೆಂಗಳೂರು.